# ಕರ್ನಾಟಕ ಲೋಕಾಯುಕ್ತ

ಸಂ:ಕಂಪ್ಲೆಂಟ್/ಲೋಕ್/ಬಿಜಿಎಂ-3527/2017/ಎಆರ್‌ಇ-14

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:23/07/2020.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ವರದಿ

ವಿಷಯ:1)ಪುಟ್ಟಸ್ವಾಮಿ ಗೌಡ ಪಾಟೀಲ, ನಿವೃತ್ತ ಪಿಡಿಓ, ಬನ್ನೀಕೊಪ್ಪ ಗ್ರಾಮ ಪಂಚಾಯತ್, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ, 2) ಲಿಂಗರಾಜ ಬಾಳೇಹೊಸೂರು, ಸಹಾಯಕ ಕೃಷಿ ಅಧಿಕಾರಿ, ಜಲಸಂಪನ್ಮೂಲ ಇಲಾಖೆ, ಶಿರಹಟ್ಟಿ, ಪ್ರಸ್ತುತ ಕೃಷಿ ಇಲಾಖೆ, ಕುಂದಗೋಳ, ಧಾರವಾಡ ಜಿಲ್ಲೆಯಲ್ಲಿ ಸೇವೆ, 3) ವಸಂತ ಜಗ್ಗಲರ, ಮಾಜಿ ಅಧ್ಯಕ್ಷರು, ಬನ್ನಿಕುಪ್ಪೆ ಗರಾಮ ಪಂಚಾಯತ್, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ, (4) ಶ್ರೀಮತಿ ಗೌರವ್ವ ಹರಿಜನ, ಮಾಜಿ ಅಧ್ಯಕ್ಷರು, ಬನ್ನಿಕೊಪ್ಪ ಗ್ರಾಮ ಪಂಚಾಯತ್, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ, (5) ಡಾ:ಕೆ.ಎಂ. ಮಲ್ಲಿಕಾರ್ಜುನಯ್ಯ, ನಿವೃತ್ತ ಸಹಾಯಕ ನಿರ್ದೇಶಕರು, ಪಶುಪಾಲನೆ ಮತ್ತು ಪಶು ಸಂಗೋಪನಾ ಇಲಾಖೆ, (ಕಾರ್ಯನಿರ್ವಾಹಕ ಅಧಿಕಾರಿಗಳು), ಶಿರಹಟ್ಟಿ ತಾಲ್ಲೂಕು ಪಂಚಾಯತ್, ಗದಗ ಜಿಲ್ಲೆ, 6) ಡಿ.ಮೋಹನ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಶಿರಹಟ್ಟಿ ತಾಲ್ಲೂಕು ಪ್ರಸ್ತುತ ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಪಶು ಆಸ್ಪತ್ರೆಯ ಸಹಾಯಕ ನಿರ್ದೇಶಕರು ರವರುಗಳ ವಿರುದ್ಧದ ನಡವಳಿ ಕುರಿತು.

* * * *

1) ಕರ್ನಾಟಕ ಲೋಕಾಯುಕ್ತ, ಗದಗ ವಿಭಾಗದ ಪೊಲೀಸ್ ಉಪಾಧೀಕ್ಷಕರು ಸ್ವಯಂ ಪ್ರೇರಿತ ಪ್ರಕರಣವನ್ನು ಗದಗ ಲೋಕಾಯುಕ್ತ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ:3/2014 ರಲ್ಲಿ ಎದುರುದಾರರುಗಳ ವಿರುದ್ಧ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ಕಲಂ 13(1)(ಸಿ) ಸಹವಾಚಕ 13(2) ಮತ್ತು ಭಾರತ ದಂಡ ಸಂಹಿತೆ ಕಲಂ 409, 420, 465, 468, 471, 474, 477(ಎ) ಸಹವಾಚಕ ಕಲಂ 149ರ ರೀತ್ಯಾ ದಾಖಲಿಸಿಕೊಂಡು ತನಿಖೆಯನ್ನು ಪೂರೈಸಿ ತನಿಖಾ ವರದಿಯನ್ನು ದಾಖಲಾತಿಗಳೊಂದಿಗೆ ಸಲ್ಲಿಸಿರುತ್ತಾರೆ. ಸದರಿ ತನಿಖಾ ವರದಿಯನ್ನು ಪರಿಶೀಲಿಸಲಾಗಿ, ಮೇಲ್ನೋಟಕ್ಕೆ ಎದುರುದಾರರು ದುರ್ನಡತೆ ಎಸಗಿರುವುದು ಕಂಡು

ಬಂದಿರುತ್ತದೆ. ಆದ್ದರಿಂದ, ಮಾನ್ಯ ಗೌರವಾನ್ವಿತರ ಒಪ್ಪಿಗೆ ಪಡೆದು ಪರಿವೀಕ್ಷಣಾ ಟಿಪ್ಪಣಿಯನ್ನು 1 ರಿಂದ 6ನೇ ಎದುರುದಾರರಿಗೆ ಕಳುಹಿಸಿ ಅವರಿಂದ ಉತ್ತರವನ್ನು ಕೇಳಲಾಗಿತ್ತು.

2) 1 ರಿಂದ 6ನೇ ಎದುರುದಾರರು ತಮ್ಮ ಉತ್ತರವನ್ನು ಸಲ್ಲಿಸಿರುತ್ತಾರೆ. 1, 2, 5 ಮತ್ತು 6ನೇ ಎದುರುದಾರರು ತಮ್ಮ ಉತ್ತರದಲ್ಲಿ, ತನಿಖಾ ವರದಿಯಲ್ಲಿ ಆಪಾದಿಸಲಾಗಿರುವಂತಹ ಆಪಾದನೆಗಳು ಸುಳ್ಳಾಗಿರುತ್ತವೆ ಅಂತಹ ಯಾವುದೇ ರೀತಿಯ ದುರ್ನಡತೆಯನ್ನು ಎಸಗಿರುವುದಿಲ್ಲ, ಸದರಿ ಕೃಷಿ ಹೊಂಡಗಳ ನಿರ್ಮಾಣ ಕಾಮಗಾರಿಯಲ್ಲಿ ನಿಯಮಾನುಸಾರವಾಗಿ ಕೈಗೊಳ್ಳಬೇಕಾದ ಎಲ್ಲ ಪ್ರಕ್ರಿಯೆಗಳನ್ನು ಪಾಲಿಸಿ ತಮ್ಮ ಪಾಲಿನ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿಭಾಯಿಸಿದ್ದು ಯಾವುದೇ ತಪ್ಪನ್ನು ಮಾಡಿರುವುದಿಲ್ಲ, ಸದರಿ ಆಪಾದನೆಗಳೆಲ್ಲವೂ ಏಕಪಕ್ಷೀಯವಾಗಿದ್ದು, ಅಲ್ಲದೆ ಆ ಅವಧಿಯಲ್ಲಿನ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದವರ ರಾಜಕೀಯ ಪ್ರೇರಿತ ಆಪಾದನೆಗಳಾಗಿರುತ್ತವೆ. ಆದ್ದರಿಂದ ತಮ್ಮಗಳ ಮೇಲೆ ವಿಚಾರಣೆಯನ್ನು ಆರಂಭಿಸಲು ಯಾವುದೇ ರೀತಿಯ ಅವಕಾಶ ಮಾಡಿಕೊಡಬಾರದು ಎಂದು ಕೇಳಿರುತ್ತಾರೆ.

3) 2ನೇ ಎದುರುದಾರರು ತಮ್ಮ ಉತ್ತರದಲ್ಲಿ, ವರದಿಯಲ್ಲಿ ಮಾಡಲಾಗಿರುವ ಎಲ್ಲಾ ಆಪಾದನೆಗಳನ್ನು ಅಲ್ಲಗಳೆದಿರುತ್ತಾರೆ. ಅಲ್ಲದೇ ಸರ್ಕಾರಕ್ಕೆ ಇಂತಿಷ್ಟೇ ಹಣ ನಷ್ಟವುಂಟಾಗಿರುತ್ತದೆ ಎನ್ನುವ ಬಗ್ಗೆ ಯಾವುದೇ ಪುರಾವೆ ಇರುವುದಿಲ್ಲ. ಸದರಿ ಕಾಮಗಾರಿಗೆ ಸಂಬಂಧಪಟ್ಟ ಕೂಲಿ ಕಾರ್ಮಿಕರ ಖಾತೆಗೆ ನೇರವಾಗಿ ಕೂಲಿ ಹಣವನ್ನು ಜಮಾ ಮಾಡಲಾಗಿದೆ. ತನಿಖಾಧಿಕಾರಿಯವರು ಬೇಕೆಂತಲೇ ಕೂಲಿಕಾರ್ಮಿಕರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ. ಒಂದು ವೇಳೆ ಪಡೆದಿದ್ದಲ್ಲಿ ಸತ್ಯಾಂಶ ಹೊರಬರುತ್ತಿತ್ತು. ಅಲ್ಲದೇ ತನಿಖಾಧಿಕಾರಿ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ, ಆದರೆ ಪಂಚನಾಮೆಗಳನ್ನು ಸೃಷ್ಟಿಸಿ ಬರೆದಿದ್ದಾರೆ. ಒಂದು ವೇಳೆ ತನಿಖಾಧಿಕಾರಿ ಸ್ಥಳಕ್ಕೆ ಭೇಟಿ ನೀಡಿದ್ದೇ ಆಗಿದ್ದಲ್ಲಿ ತನ್ನನ್ನು ಕರೆಯಿಸುತ್ತಿದ್ದರು, ಹಾಗೇ ಅವರು ಮಾಡಿರುವುದಿಲ್ಲ. ಕಳೆದ 27 ವರ್ಷಗಳಿಂದ ಕೃಷಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಕರ್ತವ್ಯದಲ್ಲಿ ಯಾವುದೇ ಕಪ್ಪುಚುಕ್ಕೆಯನ್ನು ಹೊಂದಿರುವುದಿಲ್ಲ. ಈಗ ನಿವೃತ್ತಿ ಹೊಂದಿ ಅನೇಕ ಖಾಯಿಲೆಗಳಿಂದ ಬಳಲುತ್ತಿದ್ದು, ತನ್ನನ್ನು ಪ್ರಸ್ತುತ ನಡವಳಿಕೆಗಳಿಂದ ಬಿಡುಗಡೆ ಮಾಡಬೇಕೆಂದು ಕೋರಿ ಯಾವುದೇ ರೀತಿಯ ವಿಚಾರಣೆಗೆ ಅವಕಾಶ ಮಾಡಕೂಡದು ಎಂದು ಕೇಳಿಕೊಂಡಿರುತ್ತಾರೆ.

4) 5ನೇ ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ಉತ್ತರವನ್ನು ನೀಡಿ ಅದರಲ್ಲಿ 2009-10ನೇ ಸಾಲಿನಲ್ಲಿ ದಿನಾಂಕ:01.04.2009 ರಿಂದ 30.09.2009 ರವರೆಗೆ ಅಂದರೆ ಕೇವಲ 6 ತಿಂಗಳವರೆಗೆ ಮಾತ್ರ ಶಿರಹಟ್ಟಿ ತಾಲ್ಲೂಕು ಪಂಚಾಯಿತಿ ಕಾರ್ಯಾಲಯದ ಕಾರ್ಯ

ನಿರ್ವಾಹಕ ಅಧಿಕಾರಿ ಹುದ್ದೆಯ ಹೆಚ್ಚಿನ ಪ್ರಭಾವವನ್ನು ನಿರ್ವಹಿಸಿರುತ್ತೇನೆ. ತನಿಖಾಧಿಕಾರಿಯ ವರದಿಯಲ್ಲಿ ಮಾಡಲಾಗಿರುವ ಆಪಾದನೆಗಳು ಸತ್ಯಕ್ಕೆ ದೂರವಾಗಿವೆ. ಕೃಷಿಹೊಂಡಗಳ ನಿರ್ಮಾಣ ಕಾಮಗಾರಿಗಳ ಕೆಲಸ ಮಾಡಿದ ಬಗ್ಗೆ ಸ್ಥಳ ಪರಿಶೀಲನೆ ಮಾಡುವುದು ತಾಲ್ಲೂಕು ಪಂಚಾಯಿತಿ ಕಾರ್ಯಾಲಯದ ಕಾರ್ಯನಿರ್ವಾಹಕ ಅಧಿಕಾರಿಯ ಕಾರ್ಯವ್ಯಾಪ್ತಿಯಲ್ಲಿ ಬರುವುದಿಲ್ಲ. ಅಲ್ಲದೆ ಉಲ್ಲೇಖದಲ್ಲಿ ನಮೂದಿಸಿರುವ ಪರಿವೀಕ್ಷಣಾ ಟಿಪ್ಪಣಿಯ ಕಂಡಿಕೆ 5ರಲ್ಲಿ ಖೊಟ್ಟಿ ಅಳತೆ ಪುಸ್ತಕಗಳನ್ನು ಆಧರಿಸಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯು ಹಣ ಪಾವತಿಸುವ ಮೂಲಕ ಹಣ ದುರುಪಯೋಗ ಮಾಡಿಕೊಂಡು ಸರ್ಕಾರಕ್ಕೆ ವಂಚನೆ ಮಾಡಿ ಕರ್ತವ್ಯಲೋಪವೆಸಗಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ ಎಂಬುದಾಗಿ ಆಪಾದಿಸಲಾಗಿದ್ದು, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯು ಅಳತೆ ಪುಸ್ತಕಗಳನ್ನು ಆಧರಿಸಿ ಹಣ ಪಾವತಿ ಮಾಡಿರುವುದಿಲ್ಲ. ಬದಲಾಗಿ ಯೋಜನೆಯನ್ನು ಪ್ರಾರಂಭಿಸುವ ಹಂತದಲ್ಲೇ ಮುಂಗಡವಾಗಿ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಹಾಗೂ ಕಾರ್ಯದರ್ಶಿ/ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ಜಂಟಿ ಖಾತೆಗೆ ಸರ್ಕಾರದಿಂದ ಸಮುಚಿತ ಮಾರ್ಗದಲ್ಲಿ ಹಣ ಬಿಡುಗಡೆಯಾಗಿ ಜಮೆಯಾಗಿದ್ದು, ಸಂಬಂಧಿಸಿದ ಗ್ರಾಮ ಪಂಚಾಯಿತಿ ಅಧ್ಯಕ್ಷ ಮತ್ತು ಕಾರ್ಯದರ್ಶಿ/ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಸಂಬಂಧಿಸಿದ ಕೂಲಿ ಕಾರ್ಮಿಕರ ಬ್ಯಾಂಕ್ ಖಾತೆಗೆ ಹಣವನ್ನು ಸಂಬಂಧಿಸಿದ ಎನ್.ಎಂ.ಆರ್.ಗಳ ಪಟ್ಟಿಗಳಿಗೆ ಸಂಬಂಧಿಸಿದಂತೆ ಅನುಬಂಧಗಳ ಮೂಲಕ ಪಾವತಿಸಲಾಗಿರುತ್ತದೆ. ಈ ಪ್ರಕ್ರಿಯೆಯಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಮತ್ತು ಕಾರ್ಯದರ್ಶಿ/ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರೆ ಸಂಪೂರ್ಣ ಹೊಣೆಗಾರರಾಗಿರುತ್ತಾರೆ. ಆದ್ದರಿಂದ ತಮ್ಮ ವಿರುದ್ಧ ಮಾಡಿರುವ ಆಪಾದನೆಯಿಂದ ಮುಕ್ತಿಗೊಳಿಸಬೇಕೆಂದು ಕೋರಿರುತ್ತಾರೆ.

5) 6ನೇ ಎದುರುದಾರರು ತಮ್ಮ ಉತ್ತರದಲ್ಲಿ, ಪರಿವೀಕ್ಷಣಾ ಟಿಪ್ಪಣಿಯಲ್ಲಿ ಹೊರಿಸಲಾಗಿರುವ ಕಾಮಗಾರಿಯನ್ನು ಕೈಗೊಳ್ಳಲಾಗಿಲ್ಲ ಎಂದು ಮಾಡಿರುವ ಆಪಾದನೆಯ ಸಮಯದಲ್ಲಿ ತಾನು ಸಹಾಯಕ ನಿರ್ದೇಶಕರು, ಪಶು ಆಸ್ಪತ್ರೆ, ಶಿರಹಟ್ಟಿ ಹುದ್ದೆಯ ಜೊತೆಗೆ ಹೆಚ್ಚುವರಿಯಾಗಿ ಕಾರ್ಯ ನಿರ್ವಾಹಕ ಅಧಿಕಾರಿಯಾಗಿ ಕೆಲಸ ನಿರ್ವಹಿಸಿದ್ದು, ಎರಡೂ ಇಲಾಖೆಯ ಕೆಲಸದ ಒತ್ತಡದಲ್ಲಿ ಪ್ರತಿಯೊಂದು ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ಆದ ಬಗ್ಗೆ ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಪ್ರತಿ ಗ್ರಾಮಪಂಚಾಯಿತಿಯಲ್ಲಿ ಬಹಳಷ್ಟು ಕಾಮಗಾರಿ ನಡೆಯುವುದರಿಂದ ಅದರಲ್ಲೂ ರೈತರ ಜಮೀನುಗಳಿಗೆ ವೈಯಕ್ತಿಕ ಕಾಮಗಾರಿಗಳಾದ ಕೃಷಿಹೊಂಡ, ಬದು ನಿರ್ಮಾಣ, ಹೊಳಗಟ್ಟಿ ಕಾಮಗಾರಿಗಳು ನಡೆಯುವ ಜಮೀನುಗಳಿಗೆ ಭೇಟಿ ನೀಡಿ ಖಚಿತಪಡಿಸಿಕೊಳ್ಳಲು ಸಾಧ್ಯವಾಗದ ಕೆಲಸವಾಗಿರುತ್ತದೆ. ಆದ್ದರಿಂದ ಸಂಬಂಧಪಟ್ಟ ಇಲಾಖೆಯ ತಾಂತ್ರಿಕ ಸಿಬ್ಬಂದಿಯವರು ಹಾಗೂ ಗ್ರಾಮ ಪಂಚಾಯಿತಿ ಸಿಬ್ಬಂದಿಯವರು ನೀಡುವ ದಾಖಲೆಯನ್ನು ಆಧರಿಸಿ ಹಣ ಸಂದಾಯ

ಮಂಜೂರಾತಿ ನೀಡಬೇಕಾದ ಅನಿವಾರ್ಯತೆ ಬಂದಿರುತ್ತದೆ. ಕೃಷಿಹೊಂಡಗಳು ನಿರ್ಮಾಣ ಮಾಡದೇ ಕೃಷಿ ಹೊಂಡಗಳು ನಿರ್ಮಾಣ ಆಗಿದೆ ಎಂದು ಅಳತೆ ಪುಸ್ತಕದಲ್ಲಿ ದಾಖಲು ಮಾಡಿರುವುದು ಕೃಷಿ ಇಲಾಖೆಯ ಸಿಬ್ಬಂದಿ ಹಾಗೂ ಅಧಿಕಾರಿಗಳು ನೇರ ಹೊಣೆಗಾರರಾಗಿರುತ್ತಾರೆ. ಹಾಗೂ ಸದರಿ ಕಾಮಗಾರಿಗಳು ನಡೆದಿರುವ ಬಗ್ಗೆ ಗ್ರಾಮ ಪಂಚಾಯತ್ ಅಧಿಕಾರಿಗಳು ದೃಢೀಕರಣ ನೀಡಿರುವುದರಿಂದ ಅವರು ಸಹ ನೇರ ಹೊಣೆಗಾರರಾಗಿರುತ್ತಾರೆ. ಆದ್ದರಿಂದ ಈ ಅವ್ಯವಹಾರದಲ್ಲಿ ತನ್ನ ಪಾತ್ರ ಇಲ್ಲದೇ ಇರುವುದರಿಂದ ಈ ಪ್ರಕರಣದಿಂದ ತನ್ನನ್ನು ಕೈಬಿಡಬೇಕು ಎಂದು ಕೋರಿದ್ದಾರೆ.

6) ಎಲ್ಲಾ ಎದುರುದಾರರ ಉತ್ತರಗಳನ್ನು ಗಮನಿಸಲಾಗಿ 1, 2, 5 ಮತ್ತು 6ನೇ ಎದುರುದಾರರು ಅವ್ಯವಹಾರದ ಎಲ್ಲಾ ಜವಾಬ್ದಾರಿಯನ್ನು 3 ಮತ್ತು 4ನೇ ಎದುರುದಾರರ ವಿರುದ್ಧ ಮಾಡಿದ್ದು, 3 ಮತ್ತು 4ನೇ ಎದುರುದಾರರು ಎಲ್ಲಾ ಆಪಾದನೆಗಳನ್ನು ಅಲ್ಲಗಳೆದಿರುತ್ತಾರೆ. ಆದರೆ ತನಿಖಾಧಿಕಾರಿಯವರ ವರದಿಯನ್ನು ನೋಡಲಾಗಿ, ಈ ಎದುರುದಾರರು ನೀಡಿರುವ ಉತ್ತರವನ್ನು ಸಮಂಜಸವೆಂದು ಒಪ್ಪಿಕೊಳ್ಳಲು ಈ ಹಂತದಲ್ಲಿ ಬರುವುದಿಲ್ಲ.

7) 1ನೇ ಎದುರುದಾರರು ಬನ್ನೀಕೊಪ್ಪ ಗ್ರಾಮಪಂಚಾಯಿತಿ ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿದ್ದು, 2ನೇ ಎದುರುದಾರರು ಕೃಷಿ ಇಲಾಖೆಯ ಸಹಾಯಕ ಕೃಷಿ ಅಧಿಕಾರಿಯಾಗಿದ್ದು, 3ನೇ ಎದುರುದಾರರು ಬನ್ನೀಕೊಪ್ಪ ಗ್ರಾಮ ಪಂಚಾಯಿತಿಯ ಹಿಂದಿನ ಅಧ್ಯಕ್ಷರಾಗಿರುತ್ತಾರೆ, 4ನೇ ಎದುರುದಾರರು ಸಹ ಬನ್ನೀಕೊಪ್ಪ ಗ್ರಾಮಪಂಚಾಯಿತಿ ಹಿಂದಿನ ಅಧ್ಯಕ್ಷ ಆಗಿದ್ದು, 5ನೇ ಎದುರುದಾರರು ಗದಗ ಜಿಲ್ಲೆಯ ಪಶುಸಂಗೋಪನಾ ಇಲಾಖೆಯ ನಿವೃತ್ತ ಸಹಾಯಕ ನಿರ್ದೇಶಕರಾಗಿದ್ದು, 6ನೇ ಎದುರುದಾರರು ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದು, ಶಿರಹಟ್ಟಿ ತಾಲ್ಲೂಕಿನ ಪಶು ಆಸ್ಪತ್ರೆಯ ಸಹಾಯಕ ನಿರ್ದೇಶಕರೂ ಆಗಿರುತ್ತಾರೆ.

8) ಆರಕ್ಷಕ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಗದಗ ರವರು ಈ ಎಲ್ಲಾ ಎದುರುದಾರರ ವಿರುದ್ಧ ಕಲಂ 13(1)(ಸಿ) ಪಿ.ಸಿ.ಆಕ್ಟ್ 1988 ಮತ್ತು ಕಲಂ 420, 465 ಐ.ಪಿ.ಸಿ. ರ ಅಡಿಯಲ್ಲಿ ವಿಶೇಷ ಹಾಗೂ ಜಿಲ್ಲಾ ಪ್ರಧಾನ ಸತ್ರ ನ್ಯಾಯಾಲಯ, ಗದಗ್, ಮುಂದೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

9) ತನಿಖಾಧಿಕಾರಿಯವರು ಸಲ್ಲಿಸಿರುವ ವರದಿಯನ್ನು, ದಾಖಲಾತಿಗಳನ್ನು ಪರಿಶೀಲಿಸಲಾಗಿ, ತನಿಖಾಧಿಕಾರಿ ಸ್ಥಳ ಪರಿಶೀಲಿಸಿದಾಗ 91 ಕೃಷಿ ಹೊಂಡಗಳನ್ನು ನಿರ್ಮಿಸದೆ ದಾಖಲಾತಿಗಳನ್ನು ಸೃಷ್ಟಿಸಿದ್ದು, 55 ಕೃಷಿಹೊಂಡಗಳನ್ನು ನಿರ್ಮಿಸಿದ್ದಾಗಿ ದಾಖಲಾತಿಗಳನ್ನು ಸೃಷ್ಟಿಸಿದ್ದು, ಆದರೆ ಸ್ಥಳ ಪರಿಶೀಲನಾ ಕಾಲಕ್ಕೆ 55 ಕೃಷಿಹೊಂಡ ನಿರ್ಮಿಸಿದ ಬಗ್ಗೆ ಯಾವುದೇ ಕುರುಹುಗಳು ಇಲ್ಲದೇ ಒಟ್ಟು 146 ಕೃಷಿಹೊಂಡಗಳನ್ನು ನಿರ್ಮಾಣ ಮಾಡದೇ ಒಟ್ಟು ಮೊತ್ತ ರೂ.31,57,646/- ಹಣ

ದುರುಪಯೋಗವಾಗಿ ಸರ್ಕಾರಕ್ಕೆ ವಂಚನೆಯಾಗಿರುತ್ತದೆ, 1 ರಿಂದ 6ನೇ ಎದುರುದಾರರು ಒಟ್ಟಾಗಿ ಹಣ ದುರುಪಯೋಗ ಮಾಡಿಕೊಂಡು ಸರ್ಕಾರಕ್ಕೆ ವಂಚಿಸಿ ಕರ್ತವ್ಯದಲ್ಲಿ ಲೋಪವೆಸಗಿ ಸರ್ಕಾರಿ ಹಣ ದುರುಪಯೋಗವಾಗಲು ಕಾರಣರಾಗಿರುತ್ತಾರೆ ಎಂದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

10) 3 ಮತ್ತು 4ನೇ ಎದುರುದಾರರು ಬನ್ನೀಕೊಪ್ಪ ಗ್ರಾಮಪಂಚಾಯಿತಿಯ ಮಾಜಿ ಅಧ್ಯಕ್ಷರಾಗಿರುತ್ತಾರೆ. ಪ್ರಸ್ತುತ ಯಾವುದೇ ಹುದ್ದೆಯಲ್ಲೂ ಇರುವುದಿಲ್ಲ. ಹುದ್ದೆಯನ್ನು ಹೊಂದಿರುವ ಬಗ್ಗೆ ಯಾವುದೇ ವರದಿ, ದಾಖಲಾತಿಗಳು ಇರುವುದಿಲ್ಲ. ಆದರೆ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಅಡಿಯಲ್ಲಿ ಅವರುಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಸೂಚಿಸಿದೆ.

11) 1 ರಿಂದ 6ನೇ ಎದುರುದಾರರೆಲ್ಲರೂ ಒಟ್ಟಾಗಿ ಸೇರಿ ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ ಎನ್ನುವುದು ತನಿಖಾಧಿಕಾರಿಯವರ ವರದಿಯಿಂದ ಕಂಡು ಬಂದಿರುವುದರಿಂದ, ಉಳಿದ ಎದುರುದಾರರಾದ 1)ಪುಟ್ಟಸ್ವಾಮಿ ಗೌಡ ಪಾಟೀಲ, ನಿವೃತ್ತ ಪಿಡಿಓ, ಬನ್ನೀಕೊಪ್ಪ ಗ್ರಾಮ ಪಂಚಾಯತ್, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ, 2) ಲಿಂಗರಾಜ ಬಾಳೇಹೊಸೂರು, ಸಹಾಯಕ ಕೃಷಿ ಅಧಿಕಾರಿ, ಜಲಸಂಪನ್ಮೂಲ ಇಲಾಖೆ, ಶಿರಹಟ್ಟಿ, ಪ್ರಸ್ತುತ ಕೃಷಿ ಇಲಾಖೆ, ಕುಂದಗೋಳ, ಧಾರವಾಡ ಜಿಲ್ಲೆಯಲ್ಲಿ ಸೇವೆ, 3) ಡಾ: ಕೆ.ಎಂ.ಮಲ್ಲಿಕಾರ್ಜುನಯ್ಯ, ನಿವೃತ್ತ ಸಹಾಯಕ ನಿರ್ದೇಶಕರು, ಪಶು ಸಂಗೋಪನಾ ಇಲಾಖೆ, ಗದಗ ಜಿಲ್ಲೆ ಮತ್ತು 4) ಡಿ. ಮೋಹನ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಶಿರಹಟ್ಟಿ ತಾಲ್ಲೂಕು, ಪ್ರಸ್ತುತ ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಪಶು ಆಸ್ಪತ್ರೆಯ ಸಹಾಯಕ ನಿರ್ದೇಶಕರು, ರವರುಗಳು ಸಾರ್ವಜನಿಕ ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ(ನಡತೆ)ನಿಯಮ 1966ರ ನಿಯಮ3(i) (ii) ಮತ್ತು (iii)ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಅವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ)ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ 1,2 ಮತ್ತು 5,6ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ12(3)ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

12) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಪಿ. ವಿಶ್ವನಾಥ ಶೆಟ್ಟಿ) 23/7/2020
ಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.